## ತಿಗಳಾರಿ/ತುಳು ಲಿಪಿ ಶಾಸನ?

ಹೊನ್ನಾವರ ಒಂದು ಪ್ರಖ್ಯಾತ ರೇವು ಪಟ್ಟಣವಾಗಿತ್ತು. ಇದರ ಗರ್ಭದಲ್ಲಿ ಹುದುಗಿರುವ ಚಾರಿತ್ರಿಕ ಅಂಶಗಳು ಹಲವು. ಇಲ್ಲಿರುವ ಶಾಸನ ಹೊಳಾಕುಳಿಯ ವಿಷ್ಣು ಮೂರ್ತಿ ದೇವಾಲಯದ ಆವರಣದಲ್ಲಿದೆ. ಇದರ ಲಿಪಿಯನ್ನು ಸ್ಥಳೀಯರು ತಿಗಳಾರಿ ಎನ್ನುತ್ತಾರೆ. ಈ ತಿಗಳಾರಿಯೇ ತುಳುಲಿಪಿ ಎಂದು ನಂಬಲಾಗುತ್ತಿದೆ. ಬಹು ಅಪರೂಪದ ಶಾಸನವಿದು.

—ಸುರೇಶ ತಾಂಡೇಲ, ಹೊನ್ನಾವರ





## ರಕ್ಷಣೆಯಿಲ್ಲದ ವೀರಗಲ್ಲು ನಾನು!

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ 'ಹಳೆ ಹೊನ್ನತ್ತಿ' ಗ್ರಾಮದ ವೀರನಾರಾಯಣ ದೇಗುಲದ ಹತ್ತಿರ ಮುಳ್ಳಿನ ಗಿಡಗಳಿಂದ ನಾನು (ವೀರಗಲ್ಲು) ಬಂಧಿಯಾಗಿದ್ದೇನೆ. ನನ್ನ ದೇಹವನ್ನು ಮುಳ್ಳಿನಗಿಡಗಳು ಸೀಳುತ್ತಿವೆ. ನೆಲೆ ಕಳೆದುಕೊಂಡು ಬಿಸಿಲು–ಮಳೆಯ ಆರ್ಭಟಕ್ಕೆ ಸಿಲುಕಿದ್ದೇನೆ. ನಾನಿರುವ ದೇಗುಲದಲ್ಲಿ ನವರಂಗ, ಸುಖನಾಸಿಗಳು ವಿಶಿಷ್ಟ ಕೆತ್ತನೆಗಳಿಂದ ಕೂಡಿವೆ. ಕ್ರಿ.ಶ. 11ನೇ ಶತಮಾನದಲ್ಲಿ ಅಂದರೆ ಚಿತ್ರಸೇನ ಸೋಮಶೇಖರರಾಯನ ಆಳ್ವಿಕೆಯಲ್ಲಿ ಇವು ನಿರ್ಮಾಣಗೊಂಡಿವೆ. ಸಂಶೋಧನೆಗೆ ಒಳಪಡಿಸಿದರೆ ನನ್ನಲ್ಲಿ ವಿಶಿಷ್ಟವಾದ ಕುರುಹುಗಳು ಸಿಗುತ್ತವೆ. ನನಗೆ ಸೂಕ್ತ ರಕ್ಷಣೆ ಇಲ್ಲದ ಕಾರಣ ವಿರೂಪಗೊಳ್ಳುತ್ತಿದ್ದೇನೆ. ನನ್ನಲ್ಲಿಯ ಇತಿಹಾಸ ಅಳಿಸಿ ಹೋಗುತ್ತಿವೆ. ನನ್ನನ್ನು ಮುಂದಿನ ಪೀಳಿಗೆಗೆ ಉಳಿಸಿಕೊಳ್ಳುತ್ತಿರಾ?

—ನಾಮದೇವ ಕಾಗದಗಾರ, ಕುರುವತ್ತಿ

## ಮೇಲ್ಛಾವಣಿಯಲ್ಲಿ ಅಡಗುತಾಣ

ದೇವಸ್ಥಾನಗಳ ಮೇಲ್ಛಾವಣಿಯಲ್ಲಿ ವಿವಿಧ ರೀತಿಯ ಚಿತ್ರಗಳನ್ನು ಮೂಡಿಸಿರುವುದು ಸರ್ವೇ ಸಾಮಾನ್ಯ. ಇಲ್ಲಿರುವುದು ಚನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆಯ ಚನ್ನಕೇಶವ ಸ್ವಾಮಿ ದೇವಾಲಯದ ಮೇಲ್ಛಾವಣಿಯಲ್ಲಿ ರಚಿತವಾಗಿರುವ ವಿಶೇಷವಾದ ಅಡಗುತಾಣ. ಕಿಂಡಿಯಲ್ಲಿರುವ ತೆಳುಬಂಡೆಯನ್ನು ಸರಿಸಿ ಮುಚ್ಚಿದರೆ ಅದರ ಇರುವಿಕೆಯ ಸುಳಿವೇ ಗೋಚರಿಸುವುದಿಲ್ಲ. ಎರಡನೇ ಬಲ್ಲಾಳನಿಂದ ನಿರ್ಮಿತವಾಗಿದ್ದು ಶಿಥಿಲಾವಸ್ಥೆಯಲ್ಲಿದ್ದ ಹೊಯ್ಸಳ ಶೈಲಿಯ ಈ ದೇವಾಲಯವನ್ನು 2000ನೇ ಇಸವಿಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಂದ ಜೀರ್ಣೋದ್ಧಾರವಾಗಿದೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

